Rotary
ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD



Rtn. Francesco Arezzo
R.I. President



Rtn. K. Palaksha
District Governor

# ಐಶ್ವರ್ಯ

ಸಂಪುಟ: 04 ಸಾಪ್ತಾಹಿಕ ಸಂಚಿಕೆ : 6

ದಿನಾಂಕ: 12.08.2025



Rtn. Anil Kumar
President



Rtn. Krishnappa
Secretary

## ಭಾರತೀಯ ಸೈನ್ಯದಲ್ಲಿ ಸುದೀರ್ಘ ಸೇವೆಸಲ್ಲಿಸಿದ ಹೆಮ್ಮೆಯ ಯೋಧ, ರೋಟರಿ ಐಸಿರಿಯ ಕಾರ್ಯದರ್ಶಿ ರೊ. ಕೃಷ್ಣಪ್ಪನವರ ಸಂದೇಶ



ನಾನು ಭಾರತೀಯ ಎಂದು ಮನಸ್ಸಿನಿಂದ ಹಾಗೂ ಹೆಮ್ಮೆಯಿಂದ ಹೇಳಿಕೊಳ್ಳುವ ಜನರಿಗೆ 79ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು. ಸ್ವಾತಂತ್ರ್ಯ ದಿನಾಚರಣೆ ಎಂದರೆ ಏನು... ರಾಷ್ಟ್ರಧ್ವಜ ಹಾರಿಸುವುದು, ರಾಷ್ಟ್ರಗೀತೆ ಹಾಡುವುದು ಹಾಗೂ ಸಿಹಿತಿಂಡಿಯನ್ನು ವಿತರಿಸಿ, ನಾವು ತಿಂದು ನಮ್ಮ ನಮ್ಮ ಕೆಲಸದಲ್ಲಿ ನಿರತರಾಗುವುದೇ...???......

ಏಕೆ ಈ ಮಾತನ್ನು ಕೇಳುತ್ತಿದ್ದೇನೆಂದರೆ, 1947ರಲ್ಲಿ ನಮಗೆ ಬಂದ ಸ್ವಾತಂತ್ರ್ಯಕ್ಕೂ ಮುಂಚೆ ನೂರಾರು ವರ್ಷಗಳ ಮೊದಲು ಎಷ್ಟೋ ಜನರು ಸ್ವಾತಂತ್ರ್ಯಕ್ಕಾಗಿ ಹೋರಾಡಿ ತಮ್ಮ ಪ್ರಾಣವನ್ನು ಬಲಿ ನೀಡಿರುತ್ತಾರೆ. ಈಗ ನಾವು ಅವರು ಸರಿ, ಇವರು ತಪ್ಪು ಎಂದು ನಮ್ಮಲ್ಲಿ ಜಗಳ ಮಾಡಿಕೊಳ್ಳುತ್ತಾ ನಮಗಿರೋ ಸ್ವಾತಂತ್ರ್ಯವನ್ನು ಕಳೆದುಕೊಳ್ಳದಿರೋಣ..

ನಮ್ಮ ದೇಶದ ಸಂಸ್ಕೃತಿ, ಕಲೆ, ನಾಡು, ನುಡಿ ಹಾಗೂ ನಮ್ಮ ದೇಶದ ಬೆಳವಣಿಗೆ ಆಗಲಿ ಎಂದು ನಮ್ಮ ಹಿರಿಯರು ಸ್ವಾತಂತ್ರ್ಯ ತಂದುಕೊಟ್ಟರು. ಆದರೆ ನಾವು ಜಾತಿ, ಧರ್ಮ, ಮೇಲು–ಕೀಳು, ಪಕ್ಷ ಹಾಗೂ ಭಿನ್ನಾಭಿಪ್ರಾಯಗಳನ್ನು ತುಂಬಿಕೊಂಡಿದ್ದೇವೆ. ಸ್ವಾತಂತ್ರ್ಯ ಎಂಬ ಪದವನ್ನು ಕೇವಲ ಹೆಸರಿಗೆ ಮಾತ್ರ ಸೀಮಿತಗೊಳಿಸಿದ್ದೇವೆ.

ಬನ್ನಿ ದಯಮಾಡಿ ಬದಲಾಗೋಣ. ಪ್ರತಿ ವರ್ಷ ಆಗಸ್ಟ್ 15ರಂದು ಮಾತ್ರ ಸ್ವಾತಂತ್ರ್ಯ ದಿನಾಚರಣೆ ಆಚರಿಸದೆ ವರ್ಷಪೂರ್ತಿ ಸ್ವಾತಂತ್ರ್ಯಕ್ಕೆ ಮಹತ್ವ ಕೊಟ್ಟು ನಮ್ಮ ದೇಶದ ಹೆಸರು ಗೌರವವನ್ನು ಹೆಚ್ಚಿಸೋಣ ಹಾಗೂ ನಮ್ಮ ಮನೆಯಲ್ಲಿ ನಮ್ಮ ಮಕ್ಕಳಿಗೆ ದೇಶ ಭಕ್ತಿ ಹಾಗೂ ದೇಶ ಪ್ರೇಮವನ್ನು ತುಂಬಿ ಹೆಮ್ಮೆಯ ಭಾರತೀಯರನ್ನಾಗಿ ಬೆಳೆಸೋಣ. ನಮಗೆ ಸಿಕ್ಕಿರುವ ಸ್ವಾತಂತ್ರ್ಯವನ್ನು ಉಳಿಸಿ ಬೆಳೆಸಿ ಹಾಗೂ ಕಾಪಾಡಿಕೊಂಡು ಹೋಗುವುದೇ ನಿಜವಾದ ಸ್ವಾತಂತ್ರ್ಯ.

ನಮ್ಮ ದೇಶ ಸ್ವತಂತ್ರವಾಗಲು ಶ್ರಮಿಸಿದ ಎಲ್ಲಾ ಹಿರಿಯರನ್ನು ನೆನಪಿಸಿಕೊಂಡು, ಪೂಜಿಸಿಕೊಂಡು ನಮಗೆ ಸಿಕ್ಕಿರುವ ಸ್ವಾತಂತ್ರ್ಯವನ್ನು ಉಳಿಸಿಕೊಂಡು, ಕಾಪಾಡಿಕೊಂಡು ಹೋಗೋಣ.

1947ರಂದು ದೊರೆತ ಸ್ವಾತಂತ್ರ್ಯವನ್ನು 79 ವರ್ಷಗಳ ಕಾಲ ಸುರಕ್ಷಿತವಾಗಿ ಕಾಪಾಡಿಕೊಂಡು ಬಂದವರಲ್ಲಿ ಅಗ್ರಸ್ಥಾನದಲ್ಲಿರುವವರು ನಮ್ಮ ದೇಶದ ಹೆಮ್ಮೆಯ ಸೈನಿಕರು. ಇವರಿಗೆ ಭಾರತಾಂಬೆ ಇನ್ನೂ ಹೆಚ್ಚು ಶಕ್ತಿ ನೀಡಲಿ ಎಂದು ಬೇಡಿಕೊಳ್ಳುವ. ನಾವು ನಮ್ಮ ಮನೆಯ ಮಕ್ಕಳನ್ನು ದೇಶದ ಸೈನ್ಯಕ್ಕೆ ಸೇರಲು ಪ್ರೋತ್ಸಾಹಿಸೋಣ ಹಾಗೂ ಭಾರತಾಂಬೆಯ ವೀರ ಪುತ್ರರಾಗಲು ಶ್ರಮಿಸೋಣ.

**ಜೈ ಹಿಂದ್**

## ಆಶಾ ಕಾರ್ಯಕರ್ತೆಯರ ಉಪಯೋಗಕ್ಕೆ ರಕ್ತದೊತ್ತಡ ಮಾಪಕ ನೀಡಲಿರುವ ರೋಟರಿ ಐಸಿರಿ

ಪ್ರಾಥಮಿಕ ಆರೋಗ್ಯ ಕೇಂದ್ರದ ಆಶಾ ಕಾರ್ಯಕರ್ತೆಯರು ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಹಾಯವಾಗುವಂತೆ ತನ್ನ ವ್ಯಾಪ್ತಿಯ ಹನ್ನೊಂದು ಮಂದಿ ಆಶಾ ಕಾರ್ಯಕರ್ತೆಯರಿಗೂ ರೋಟರಿ ಐಸಿರಿ ಪರ್ಕಳವು ತಲಾ ಒಂದೊಂದು ಬ್ಲಡ್ ಪ್ರೆಶರ್ ತಪಾಸಣಾ ಉಪಕರಣಗಳನ್ನು (ಬಿಪಿ ಮಾನಿಟರ್) ಇಂದಿನ ವಾರದ ಸಭೆಯಲ್ಲಿ ವಿತರಿಸಲಿದೆ. ಆರ್.ಸಿ.ಸಿ. ಕಾರ್ಯಾಲಯದಲ್ಲಿ ನಡೆಯಲಿರುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೋಟರಿ ಐಸಿರಿಯ ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ವಹಿಸಲಿದ್ದಾರೆ. ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್, ವಲಯ ಸೇನಾನಿ ರೊ. ಸ್ಮಿತಾ ಜಿ. ಕಾಮತ್, ಸಿವಿಲ್ ಇಂಜಿನಿಯರ್ ಶ್ರೀಯುತ ವಿಕ್ರಮ್ ಕುಲಾಲ್, ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈ, ವೃತ್ತಿಪರಸೇವೆಗಳ ನಿರ್ದೇಶಕ – ಸ್ಥಾಪಕಾಧ್ಯಕ್ಷ ರೊ. ಕೆ. ಪ್ರಭಾಕರ ಶೆಟ್ಟಿ, ಕಾರ್ಯದರ್ಶಿ ರೊ. ಕೃಷ್ಣಪ್ಪ, ಚುನಾಯಿತ ಅಧ್ಯಕ್ಷ ರೊ. ಸಂದೀಪ್ ಕುಮಾರ್, ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿರಲಿದ್ದಾರೆ.

# ರೋಟರಿ ಇಂಟರ್ನ್ಯಾಷನಲ್ - ಅಧ್ಯಕ್ಷರ ಆಗಸ್ಟ್ ತಿಂಗಳ ಸಂದೇಶ



**Francesco Arezzo**
President 2025-26

Rotary Club of Ragusa
ITALY

August is Membership Month, but our commitment to growth and connection is year-round. When we focus on growing Rotary, we grow our ability to serve, to lead, and to bring lasting change.

Membership growth isn't just about numbers. It's about opening doors. It's about inviting more people who are ready to give their time, talents, and hearts to a cause greater than themselves. When we welcome new members, we bring in fresh ideas and new energy. We expand our impact, strengthen our clubs, and ensure that Rotary continues to evolve with the world around us.

Remember, there is now great flexibility in fashioning nontraditional club models. I'm inspired when I see these innovative clubs thrive by offering new and prospective members more ways to connect and serve.

In Korea, the growth of satellite clubs has created opportunities for nearly 1,000 new members to find their place in Rotary. In Romania, the close collaboration between Rotarians, Rotaractors, and Interactors has built a pipeline of future leaders. In India, some Rotarians gather around a shared interest — whether it's professional development or a passion for service — and those connections deepen their commitment and their joy in being part of Rotary. And we've seen cause-based clubs thrive in regions as diverse as Southeast Asia, Africa, and Europe.

There's a common thread: Where clubs are growing, membership is a priority and there is a willingness to try something new. Rotary is not limited to one structure or tradition. We are a global network of people of action, and that means there is room for many kinds of clubs, many ways to serve, and many paths into our organization.

This spirit of innovation is also guiding our efforts to reach new communities. In places where there has never been a Rotary club — or where a club once existed and faded — Rotarians are finding ways to grow Rotary. They are identifying areas of potential and building clubs that reflect the character and needs of their communities.

Every member plays a part in this journey. Whether you introduce a friend to your club, support a new meeting format, reconnect with program alumni, or simply share your Rotary story, you are helping our organization grow stronger and more vibrant.

No one owns a Rotary club. It is a gift we pass on to the next generation. When we nurture that gift, when we invite others to share in it, we ensure that Rotary continues to be a force for good.

Let's prioritize membership growth — not just in August but every month of the year. Together, through friendship, creativity, and shared purpose, we will grow Rotary and Unite for Good.

## ಬೌದ್ಧಿಕ ಸಿರಿ

ಒಂದೂರಲ್ಲಿ ಒಬ್ಬ ಬೇಟೆಗಾರನಿದ್ದ. ಮಂಗಗಳನ್ನು ಹಿಡಿದು ಪಳಗಿಸಿ, ಮಾರಾಟ ಮಾಡಿ ಹಣ ಸಂಪಾದಿಸುವುದು ಅವನ ಜೀವನವಾಗಿತ್ತು. ಮಂಗಗಳಿಗೆ ಇಷ್ಟವಾದ ಆಹಾರಗಳಲ್ಲಿ ನೆಲಕಡಲೆಕಾಯಿಯೂ ಒಂದು.

ಬೇಟೆಗಾರನು ಎಳೆನೀರು ಕುಡಿದ ಮೇಲೆ, ಅದರ ರಂಧ್ರವನ್ನು ಸ್ವಲ್ಪ ದೊಡ್ಡದು ಮಾಡಿ, ಅದರೊಳಗೆ ಒಂದಷ್ಟು ನೆಲಕಡಲೆಕಾಯಿಗಳನ್ನು ಹಾಕಿ ಆ ಎಳನೀರನ್ನು ಭದ್ರವಾಗಿ ಕಟ್ಟಿಡುತ್ತಿದ್ದ. ಹೀಗಿರುವಾಗ ಮಂಗವೊಂದು ನೆಲಕಡಲೆಕಾಯಿ ತಿನ್ನುವ ಆಸೆಯಿಂದ ಎಳನೀರಿನ ರಂಧ್ರದೊಳಗೆ ಕೈ ಹಾಕಿ ನೆಲಕಡಲೆಕಾಯಿಯನ್ನು ತನ್ನ ಮುಷ್ಠಿಯೊಳಗೆ ಗಟ್ಟಿಯಾಗಿ ಹಿಡಿದುಕೊಂಡಿತು. ಹೀಗೆ ಮುಷ್ಟಿ ಹಿಡಿದುಕೊಂಡಾಗ ಮಂಗನಿಗೆ ಆ ರಂದ್ರದಿಂದ ಕೈಯನ್ನು ಹೊರತೆಗೆಯಲು ಸಾಧ್ಯವಾಗಲಿಲ್ಲ.

ಬೇಟೆಗಾರನು ಬರುತ್ತಿರುವುದನ್ನು ಮಂಗವು ನೋಡಿತು. ಆದರೂ ತನ್ನ ಮುಷ್ಠಿಯಲ್ಲಿದ್ದ ಆ ನೆಲಕಡಲೆಕಾಯಿಯನ್ನು ಅದು ಬಿಡಲು ಸಿದ್ಧವಿರಲಿಲ್ಲ. ಒಂದು ವೇಳೆ ಕೈಯ ಮುಷ್ಟಿಯನ್ನು ತೆರೆದಿದ್ದರೆ ನೆಲಕಡಲೆಕಾಯಿ ಕೆಳಗೆ ಬೀಳುತ್ತಿತ್ತು. ಆದರೆ ಮಂಗ ತನ್ನ ಕೈಯನ್ನು ಹೊರಗೆ ತೆಗೆಯಲು, ಓಡಿ ಹೋಗಿ ಮರದ ಮೇಲೇರಿ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿತ್ತು. ಸ್ವಲ್ಪ ಹೊತ್ತಿನಲ್ಲೇ ಆ ಬೇಟೆಗಾರನು ಆ ಮಂಗವನ್ನು ಸೆರೆಹಿಡಿದನು.

ಇದನ್ನು ಮರ್ಕಟ ಮುಷ್ಟಿ ಎನ್ನುತ್ತಾರೆ. ಮರ್ಕಟ ಮುಷ್ಟಿ ಎಂದರೆ ಕೋತಿ ತನ್ನ ಮುಷ್ಠಿಯಲ್ಲಿ ಏನನ್ನಾದರೂ ಬಿಗಿಯಾಗಿ ಹಿಡಿದುಕೊಂಡರೆ ಮತ್ತೆ ಅದು ಬಿಡಲು ಸಿದ್ಧವಿರುವುದಿಲ್ಲ.

ಮಂಗನಿಂದಲೇ ಮಾನವ ಎನ್ನುವುದನ್ನು ಪದೇಪದೇ ಸಾಬೀತು ಪಡಿಸುವಂತೆ, ಮನುಷ್ಯರೂ ಸಹ ಕೆಲವೊಮ್ಮೆ ತನ್ನ ಆಸೆ, ಆಸಕ್ತಿ, ಬಯಕೆಗಳು, ಬಿಗುಮಾನ, ಅಭಿಪ್ರಾಯ, ಯೋಜನೆ, ಯೋಚನೆ, ಚಿಂತನೆ ಇತ್ಯಾದಿಗಳು ಸಮಷ್ಟಿ ಹಿತಕ್ಕೆ ಪೂರಕ ವಿಲ್ಲದಿದ್ದರೂ, ತನ್ನ ಹಿತಕ್ಕೇ ಮಾರಕವಾಗು ವುದಿದ್ದರೂ, ಏನೇ ಹಾನಿಯಾದರೂ ಸಹಕರಿಸದೇ ಮರ್ಕಟ ಮುಷ್ಟಿ ಬಿಡದ ರೀತಿಯಲ್ಲೇ ಮನಸ್ಸನ್ನು ಬಿಗಿಹಿಡಿದು ಬಿಡುತ್ತಾರಂತೆ...!

## ಪ್ರತಿಭಾ ಸಿರಿ: ಸ್ವತಂತ್ರ



ಸ್ವಾತಂತ್ರ್ಯ ಮಂತ್ರವದು ಬಲ್ಲಿರೇನಣ್ಣ
ಸ್ವಾತಂತ್ರ್ಯ ಯಜ್ಞವದು ಅರಿತಿರೇನಣ್ಣ
ಬಂಧಿಗೇ ಗೊತ್ತು ಕಾಣದ ಸಂಕೋಲೆಯ ಹಿಡಿತ
ನೊಂದವನಿಗೇ ಗೊತ್ತು ತನ್ನ ನೆಲೆ ಪರರದಾಗುವ ಆತಂಕ

ಆಕ್ರಮಣವಲ್ಲ ಅತಿಕ್ರಮಣ ನೆಲ ಜಲ ಸಂಸ್ಕೃತಿ ತಲ್ಲಣ
ಒಡೆದು ಹೋಳಾದೆವಲ್ಲ ತಿಳಿಯದೆ ಮೂಢರಾದೆವಲ್ಲ
ಹೊನ್ನು ಮಣ್ಣು ವಜ್ರ ವೈಭವ ಅನಾಯಾಸವಾಗಿ ಕಳೆದುಕೊಂಡೆವಲ್ಲ
ಅರಮನೆ ಸೆರೆಮನೆಯಾಗಿ ಬದುಕು ಸಾಲವಾಯಿತಲ್ಲ

ಇರಲಿ ಆ ಬೇಗುದಿಗೊಂದು ಬೆಲೆ ಇರಲಿ ಅಳಿದ ಹಿರಿತನಕ್ಕೆ ಬೆಲೆ
ಹೊರಲಿ ಹೊಣೆ ಹೊಸ ಬದುಕಿನ ಕುಡಿಗಳು
ಸ್ವಾತಂತ್ರ್ಯವ ಅರಿತು ಗೌರವಿಸಲಿ ಹೊಸ ಜನಾಂಗವು
ಸದಾ ಸ್ವತಂತ್ರವಾಗಿರಲಿ ಭಾರತಾಂಬೆಯ ಮಡಿಲು

– ಮಂದಸ್ಮಿತ

## ಪ್ರೇರಣಾ ಸಿರಿ: ರೋಟರಿ ಮಾಹಿತಿ: ವೈವಿಧ್ಯತೆ, ಸಮಾನತೆ ಮತ್ತು ಸೇರ್ಪಡೆ

ಜನರು ಒಗ್ಗೂಡಿ ಶಾಶ್ವತ ಬದಲಾವಣೆಯನ್ನು ಸೃಷ್ಟಿಸಲು ಕ್ರಮ ಕೈಗೊಳ್ಳುವ ಜಗತ್ತನ್ನು ನಿರ್ಮಿಸಲು ಶ್ರಮಿಸುವ ಜಾಗತಿಕ ಜಾಲವಾಗಿ, ರೋಟರಿ ವೈವಿಧ್ಯತೆಯನ್ನು ಗೌರವಿಸುತ್ತದೆ. ಮತ್ತು ವಯಸ್ಸು, ಜನಾಂಗ, ವರ್ಣ, ಸಾಮರ್ಥ್ಯಗಳು, ಧರ್ಮ, ಸಾಮಾಜಿಕ– ಆರ್ಥಿಕ ಸ್ಥಿತಿ, ಸಂಸ್ಕೃತಿ, ಮತ್ತು ಲಿಂಗ ಗುರುತನ್ನು ಲೆಕ್ಕಿಸದೆ ಎಲ್ಲಾ ಹಿನ್ನೆಲೆಗಳ ಜನರ ಕೊಡುಗೆಗಳನ್ನು ಸ್ವಾಗತಿಸುತ್ತದೆ.

**ಆರ್‌ಸಿಸಿ** ಸದಸ್ಯರು ಸ್ಥಳೀಯ ರೋಟರಿ ಕ್ಲಬ್‌ಗಳ ಸಹಯೋಗದೊಂದಿಗೆ ತಮ್ಮ ಸಮುದಾಯಗಳಲ್ಲಿ ಯೋಜನೆಗಳನ್ನು ಯೋಜಿಸುತ್ತಾರೆ ಮತ್ತು ನಿರ್ವಹಿಸುತ್ತಾರೆ. ರೋಟರಿ ಕ್ಲಬ್‌ನಿಂದ ಪ್ರಾಯೋಜಿಸಲ್ಪಟ್ಟ ಆರ್‌ಸಿಸಿ, ಸೇವಾ ಯೋಜನೆಗಳನ್ನು ಯೋಜಿಸಲು ಮತ್ತು ಕಾರ್ಯಗತಗೊಳಿಸಲು ಕ್ಲಬ್‌ಗಳೊಂದಿಗೆ ಪಾಲುದಾರಿಕೆ ಮಾಡಿಕೊಳ್ಳುವ ಮೂಲಕ ರೋಟರಿಯ ನೆಟ್‌ವರ್ಕ್, ಬ್ರ್ಯಾಂಡ್ ಮತ್ತು ಮಾರ್ಗದರ್ಶನವನ್ನು ಬಳಸಿಕೊಳ್ಳುತ್ತದೆ. ಆರ್‌ಸಿಸಿಗಳು ರೋಟರಿಯ ಪ್ರಭಾವವನ್ನು ಹೆಚ್ಚಿಸುತ್ತವೆ ಮತ್ತು ಸುಸ್ಥಿರ ಯೋಜನೆಗಳ ಮೂಲಕ ತಮ್ಮ ಸಮುದಾಯವನ್ನು ಬಲಪಡಿಸಲು ಸ್ಥಳೀಯ ಜನರ ಜ್ಞಾನ ಮತ್ತು ಪ್ರತಿಭೆಯನ್ನು ತರುವ ಮೂಲಕ ಅದರ ವ್ಯಾಪ್ತಿಯನ್ನು ವಿಸ್ತರಿಸುತ್ತವೆ.

**ಇಂಟರ್ಯಾಕ್ಟ್** ಕ್ಲಬ್‌ಗಳು 12 ರಿಂದ 18 ವರ್ಷ ವಯಸ್ಸಿನವರನ್ನು ಒಟ್ಟುಗೂಡಿಸಿ ನಾಯಕತ್ವ ಕೌಶಲ್ಯಗಳನ್ನು ಬೆಳೆಸಿಕೊಳ್ಳುತ್ತವೆ ಮತ್ತು ಸ್ವಯಂ ಸೇವೆಯ ಶಕ್ತಿಯನ್ನು ಕಂಡುಕೊಳ್ಳಲು ಪ್ರೇರಣೆ ನೀಡುತ್ತವೆ. ಇಂಟರ್ಯಾಕ್ಟ್ ಎಂಬುದು ರೋಟರಿ ಇಂಟರ್‌ನ್ಯಾಷನಲ್‌ನ ಸೇವಾ ಕ್ಲಬ್ ಆಗಿದೆ. ಇಂಟರ್ಯಾಕ್ಟ್ ಕ್ಲಬ್‌ಗಳನ್ನು ರೋಟರಿ ಕ್ಲಬ್‌ಗಳು ಪ್ರಾಯೋಜಿಸುತ್ತವೆ, ಬೆಂಬಲ ಮತ್ತು ಮಾರ್ಗದರ್ಶನವನ್ನು ನೀಡುತ್ತದೆ.

**ರೋಟರಾಕ್ಟ್** ಕ್ಲಬ್‌ಗಳು 18 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಜನರನ್ನು ಸಮುದಾಯದ ನಾಯಕರೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳಲು, ನಾಯಕತ್ವ ಮತ್ತು ವೃತ್ತಿಪರ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ಸೇವೆಯ ಮೂಲಕ ಅನುಭವ ಪಡೆಯಲು ಒಟ್ಟುಗೂಡಿಸುತ್ತವೆ. ರೋಟರಾಕ್ಟ್ ಕ್ಲಬ್ ಗಳನ್ನು ರೋಟರಿ ಕ್ಲಬ್‌ಗಳು ಪ್ರಾಯೋಜಿಸಿ, ಬೆಂಬಲ ಮತ್ತು ಮಾರ್ಗದರ್ಶನವನ್ನು ನೀಡುತ್ತದೆ. ಸಾಮಾನ್ಯವಾಗಿ ಸಮುದಾಯ ಸೇವಾ ಕಾರ್ಯಗಳಲ್ಲಿ ರೋಟರಿ ಮತ್ತು ರೋಟರಾಕ್ಟ್ ಸದಸ್ಯರು ಜೊತೆಜೊತೆಯಾಗಿ ಕೆಲಸ ಮಾಡುತ್ತಾರೆ.



## ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 5ನೇ ವಾರದ ಸಭೆಯು 07/08/2025, ಗುರುವಾರದಂದು RCC ಕಾರ್ಯಾಲಯದಲ್ಲಿ ಜರುಗಿತು. ದಂಡಪಾಣಿ ರೊ.ಕೊರಗಪ್ಪ ಶೆಟ್ಟಿಗಾರ್ ರವರು ಅಧ್ಯಕ್ಷರಿಗೆ ಕೊರಳ ಲಾಂಛನ ತೊಡಿಸಿ, ಅಧ್ಯಕ್ಷರು ಸಭೆಯನ್ನು ಆರಂಭಿಸಿದರು. ರೊ. ಎ. ಗಣೇಶ ಅವರ ಪ್ರಾರ್ಥನೆಯ ಬಳಿಕ ಅಧ್ಯಕ್ಷ ರೊ. ಅನಿಲ್ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು. ಜೊತೆಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ಕಳೆದ ವಾರದ ವರದಿಯನ್ನು ಮಂಡಿಸಿದರು.

ರೊ. ಕೆ. ಪ್ರಭಾಕರ್ ಶೆಟ್ಟಿ ಇವರು 03/08/2025ರಂದು ನಡೆದ ಬೃಹತ್ ಸ್ವಚ್ಛತಾ ಕಾರ್ಯಕ್ರಮದ ಬಗ್ಗೆ ತನ್ನ ಅಭಿಪ್ರಾಯ ವ್ಯಕ್ತಪಡಿಸಿದರು.

ಐಶ್ವರ್ಯ ಸಂಚಿಕೆಯ 5ನೇ ವಾರದ ಸಂಚಿಕೆಯನ್ನು ರೊ. ಎ. ಗಣೇಶ ಬಿಡುಗಡೆಗೊಳಿಸಿದರು. ಸಂಪಾದಕರಾದ ರೊ. ರಾಜೇಶ್ ಡಿ. ಶೆಣೈ ಸಹಕರಿಸಿದರು.

ಕೋಶಾಧಿಕಾರಿ ರೊ. ಎ. ಗಣೇಶರವರು ಇದುವರೆಗೆ ಐಸಿರಿ ನಡೆಸಿದ ಕಾರ್ಯಕ್ರಮಗಳ ಲೆಕ್ಕಪತ್ರ ಮಂಡಿಸಿದರು. ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ರವರು ಸೆಪ್ಟೆಂಬರ್ ನಲ್ಲಿ ನಡೆಯಲಿರುವ ಜಿಲ್ಲಾ ಇಂಟರಾಕ್ಟ್ ಅಸೆಂಬ್ಲಿಯ ಪೂರ್ವತಯಾರಿ ಬಗ್ಗೆ ಮಾತನಾಡಿದರು. ಬೃಹತ್ ಸ್ವಚ್ಛತಾ ಕಾರ್ಯಕ್ರಮದ ಸಮಯ ಪಾಲನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಘಸೇವಾ ನಿರ್ದೇಶಕರಾದ ರೊ. ಸುನಿಲ್ ಕುಮಾರ್ ಅವರು ಪ್ರಕಟಣೆಗಳನ್ನು ತಿಳಿಸಿ ಡಿಸ್ಟ್ರಿಕ್ಟ್ ಅವಾರ್ಡ್ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸಿದರು. ಸದಸ್ಯರಿಗೆ ಅವಕಾಶದಲ್ಲಿ ರೊ. ಮಂಜುನಾಥ ಉಪಾಧ್ಯ ಮಾತನಾಡಿ ಅನಿಸಿಕೆಗಳನ್ನು ತಿಳಿಸಿದರು.

ಆನ್ ಪಲ್ಲವಿ ಅವರನ್ನು ಮೀಟಿಂಗ್ ನಲ್ಲಿ ಭಾಗವಹಿಸಿದ್ದಕ್ಕಾಗಿ ಗುರುತಿಸಲಾಯಿತು. ರೊ. ಗುರುಪ್ರಸಾದ್ ಕಾಮತ್ ಹಾಗೂ ರೊ. ರಾಜೇಶ್ ಡಿ. ಶೆಣೈ ಅವರನ್ನು ಅಕಾಡೆಮಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪುಸ್ತಕ ಹಂಚುವ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ಗುರುತಿಸಲಾಯಿತು. ರೊ. ಕೆ. ಪ್ರಭಾಕರ್ ಶೆಟ್ಟಿ ಇವರನ್ನು ಬೃಹತ್ ಸ್ವಚ್ಛತಾ ಕಾರ್ಯಕ್ರಮ ಆಯೋಜಿಸಿದ್ದಕ್ಕಾಗಿ ಗುರುತಿಸಲಾಯಿತು. ರೊ. ಎ. ಗಣೇಶ ಅವರನ್ನು ಕ್ಲಪ್ತ ಸಮಯದಲ್ಲಿ ಆಯವ್ಯಯ ಮಂಡಿಸಿದ್ದಕ್ಕಾಗಿ ಗುರುತಿಸಲಾಯಿತು. ರೊ. ರಾಜೇಶ್ ಡಿ. ಶೆಣೈ ಅವರನ್ನು ಐಶ್ವರ್ಯ ಸಂಚಿಕೆಯ ಯಶಸ್ವಿ ನಿರ್ವಹಣೆಗೆ ಗುರುತಿಸಲಾಯಿತು. ರೊ. ನಾಗರಾಜ್ ರಾವ್ ಅವರನ್ನು ಬೃಹತ್ ಸ್ವಚ್ಛತಾ ಕಾರ್ಯಕ್ರಮದಲ್ಲಿ ಉಚಿತ ಉಪಹಾರ ನೀಡಿದ್ದಕ್ಕಾಗಿ ಗುರುತಿಸಲಾಯಿತು. ರೊ. ನಾಗರಾಜ್ ನಾಯಕ್ ಅವರ ಅನುಪಸ್ಥಿತಿಯಲ್ಲಿ ಅವರ ಹುಟ್ಟುಹಬ್ಬಕ್ಕೆ ಶುಭಕೋರಲಾಯಿತು. ರೊ. ಸಂದೀಪ್ ಕುಮಾರ್ ಅವರು ಮುಂದಿನ ಪರ್ಯಾಯ ಸಮಿತಿಯ ಜೊತೆ ಕಾರ್ಯದರ್ಶಿಯಾಗಿ ಆಯ್ಕೆಗೊಂಡಿದ್ದಕ್ಕಾಗಿ ಗುರುತಿಸಲಾಯಿತು.

ಅಧ್ಯಕ್ಷ ರೊ. ಅನಿಲ್ ಕುಮಾರ್ ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಆನ್ ಪಲ್ಲವಿ ಅವರು ಅದೃಷ್ಟಶಾಲಿ ರೋಟೆರಿಯನ್ ಆಯ್ಕೆ ನಡೆಸಿದರು. ರೊ. ಕೊರಗಪ್ಪ ಶೆಟ್ಟಿಗಾರ್ ಅದೃಷ್ಟಶಾಲಿಯಾಗಿ ಆಯ್ಕೆಗೊಂಡರು.

ಜೊತೆ ಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ವಂದನಾರ್ಪಣೆಗೈದರು. ದಂಡಪಾಣಿ ಕೊರಳ ಲಾಂಛನ ತೆಗೆದು, ಅಧ್ಯಕ್ಷರು ಸಭೆಯನ್ನು ಮುಂದೂಡಿದರು,

ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 5ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ ಐದನೇ ಆವೃತ್ತಿಯನ್ನು ಕೋಶಾಧಿಕಾರಿ, ಪೂರ್ವ ಜಿಲ್ಲಾ ಸಹಾಯಕ ಗವರ್ನರ್ ರೊ. ಎ. ಗಣೇಶ ರವರು ಬಿಡುಗಡೆಗೊಳಿಸಿದ ಕ್ಷಣ.




ರೋಟರಿ ಐಸಿರಿಯ ಪ್ರತೀ ವಾರದ ಸಭೆಯ ಅಂತ್ಯದಲ್ಲಿ ಚೀಟಿ ಎತ್ತುವ ಮೂಲಕ ಲಕ್ಕಿ ರೋಟೇರಿಯನ್ ಆಯ್ಕೆ ಮಾಡಲಾಗುತ್ತದೆ. ಆಗಸ್ಟ್ 7 ರಂದು ನಡೆದ ಐದನೇ ವಾರದ ಸಭೆಯಲ್ಲಿ ಈ ಅದೃಷ್ಟಶಾಲಿ ರೋಟೇರಿಯನ್ ಆಯ್ಕೆಯನ್ನು ಆನ್ ಪಲ್ಲವಿ ನಡೆಸಿದರು. ರೊ. ಕೊರಗಪ್ಪ ಶೆಟ್ಟಿಗಾರ್ ಅವರು ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಯಾದರು.




2026 ಜನವರಿ 18ರಂದು ನಡೆಯಲಿರುವ ಶಿರೂರು ಮಠ ಪೀಠಾಧಿಪತಿಗಳಾದ ಶ್ರೀ ವೇದವರ್ಧನ ತೀರ್ಥರ ಪರ್ಯಾಯ ಮಹೋತ್ಸವ ಸಮಿತಿಯ ಜೊತೆ ಕಾರ್ಯದರ್ಶಿಯಾಗಿ ರೋಟರಿ ಐಸಿರಿಯ ಚುನಾಯಿತ ಅಧ್ಯಕ್ಷ ರೊ. ಸಂದೀಪ್ ಕುಮಾರ್ ಅವರು ಆಯ್ಕೆಗೊಂಡಿದ್ದಕ್ಕಾಗಿ ಸಭೆಯಲ್ಲಿ ಗುರುತಿಸಿ ಅಭಿನಂದಿಸಲಾಯಿತು.